## ವಾಕ್ ಯುದ್ಧ

ಆಗಸ್ಟ್ 13ರ ಸಂಚಿಕೆಯಲ್ಲಿ ಡಾ. ಪ್ರೇಮಲತಾ ಬಿ. ಅವರು ಬರೆದ 'ವಾಕ್‌ಯುದ್ಧ' ಲೇಖನ ಸಮಕಾಲೀನ ಸಮಸ್ಯೆಯೊಂದಕ್ಕೆ ಕನ್ನಡಿ ಹಿಡಿಯುವಂತಿತ್ತು. ಅದರಲ್ಲಿ ಅವರು ಹೇಗೆ ವಾದ ಮಾಡಬೇಕು, ಚರ್ಚೆಯನ್ನು ಸಮಸ್ಯೆಗಳ ನಿರ್ವಹಣೆಗೆ ಪೂರಕವಾಗಿ ಹೇಗೆ ಬಳಸಬಹುದು ಎಂದು ವಿವರಣೆ ನೀಡಿದ್ದಾರೆ. ವಾದ 'ಸಂವಾದ'ವಾಗಬೇಕೇ ಹೊರತು ಸಂಶಯ ಸಂಘರ್ಷಕ್ಕೆಡೆ ಮಾಡಿಕೊಡಬಾರದು. ತಾಳ್ಮೆಯಿಂದ ಇತರರ ಅಭಿಪ್ರಾಯವನ್ನು ಆಲಿಸುವ, ಗೌರವಿಸುವ ಮನೋವೃತ್ತಿ ಬೆಳೆಸಿಕೊಂಡು ವಾದಕ್ಕಿಳಿದಾಗ ವಾದ ಸುನಾದಿಯಾದೀತು.

—ಕೆ.ವಿ. ಸೀತಾರಾಮ್, ಮಂಗಳೂರು



ಪ್ರಾಮಾಣಿಕತೆಗೂ ವಂಚನೆಗೂ ಥಟ್ಟನೆ ಗುರ್ತಿಸುವುದು ಸಾಧ್ಯವಿಲ್ಲ ಎನ್ನುವಷ್ಟು ವ್ಯತ್ಯಾಸ ಕಮ್ಮಿ. ಹಾಗೆಯೇ ಸತ್ಯವನ್ನು ಶೋಧಿಸುವ ಉದ್ದೇಶದಿಂದ ಹುಟ್ಟಿಕೊಂಡ ಚರ್ಚೆ ಅಥವಾ ವಾದಗಳೇ ಸತ್ಯವನ್ನು ಮುಚ್ಚಿಡುವುದಕ್ಕೂ, ಅಸತ್ಯವನ್ನು ಹುಟ್ಟಿಸುವುದಕ್ಕೂ ಬಳಕೆಯಾಗುತ್ತಿರುವುದಕ್ಕೆ ನಮ್ಮ ಸುತ್ತಲಿನ ವಿದ್ಯಮಾನಗಳೇ ಸಾಕ್ಷಿ. ಊಟಕ್ಕೆ ತರಕಾರಿ ಕತ್ತರಿಸುವ ಚಾಕುವಿನಲ್ಲಿಯೇ ಕತ್ತನ್ನೂ ಕತ್ತರಿಸಬಹುದಲ್ಲವೇ? ಇದೂ ಹಾಗೆಯೇ...

—ಪ್ರಬೋಧ ಜಿ. ಸೊಣಕಲ್, ರಾಣೆಬೆನ್ನೂರು

ಇಂದಿನ ಟೀವಿ ವಾಹಿನಿಗಳು, ಸೋಷಿಯಲ್ ಮೀಡಿಯಾಗಳೇ ವಾದಗಳು ಹದಗೆಡಲು ಮುಖ್ಯ ಕಾರಣಗಳು. ಟೀವಿ ಚರ್ಚೆಗಳ ಬಗ್ಗೆಯಂತೂ ಹೇಳತೀರದು. ಅದನ್ನು ವಾದ ಅನ್ನುವುದಕ್ಕಿಂತ ಯುದ್ಧ ಅನ್ನುವುದೇ ಲೇಸು. ಯಾರಿಗೂ ಮತ್ತೊಬ್ಬರ ಮಾತು ಕೇಳಿಸಿಕೊಳ್ಳುವ ತಾಳ್ಮೆ ಇರುವುದಿಲ್ಲ. ಎದುರು ಕೂತವರನ್ನು ಆಲಿಸುವ ವ್ಯವಧಾನ ಇಲ್ಲದವನಿಗೆ ತನ್ನ ವಾದವನ್ನು ಮಂಡಿಸುವ ಹಕ್ಕೂ ಇರುವುದಿಲ್ಲ ಅಲ್ಲವೇ?

—ಸ್ವಸ್ತಿ ಚೇತನ್, ಸಿದ್ದಾಪುರ

ವಾಕ್ಸಮರ ಬರಹ ಪ್ರಚಲಿತ ವಿದ್ಯಮಾನಗಳಿಗೆ ಕನ್ನಡಿ ಹಿಡಿದಿದೆ. ಜನಸಾಮಾನ್ಯರ ಜೊತೆಗೆ ಸುದ್ದಿ ಮಾಧ್ಯಮಗಳೂ, ನವಮಾಧ್ಯಮಗಳೂ ಸೇರಿದಂತೆ ವಾಕ್ಸಮರದ ಮಳೆ ನಿರಂತರವಾಗಿ ಎಲ್ಲರ ಕಿವಿಗಳೂ ತೂತು ಬಿದ್ದಿವೆ! ಪ್ರಾಯಶಃ ಇವರೆಲ್ಲರನ್ನೂ ಸಾಮೂಹಿಕವಾಗಿ ಮನೋಚಿಕಿತ್ಸೆಗೆ ಗುರಿಪಡಿಸದಿದ್ದರೆ ಅಮಾಯಕ ಬಡಪಾಯಿಗಳನ್ನು ಆ ದೇವರೂ ಕಾಪಾಡಲಾರ.

—ಚನ್ನಬಸವ ಪುತ್ತೂರು ಚಿತ್ರದುರ್ಗ

### ಗಮನಾರ್ಹ ಕಥೆ '..ಮೊಬೈಲ್ ದುಖಾನು'

ಹೆಸರು ಮತ್ತು ಮೊದಲ ಪಂಕ್ತಿಯಿಂದಲೇ ಆಕರ್ಷಿಸಿ ಪೂರ್ತಿ ಓದಿಸಿಕೊಂಡು ಹೋದ ಕಥೆ '...ದುಖಾನು'. (ಆ. 13ರ ಸಂಚಿಕೆ) ನವ್ಯಸಾಹಿತ್ಯದ ಕಾಲಘಟ್ಟದಲ್ಲಿ ಈ ಕಥೆ ಬಂದಿದ್ದರೆ ಅದಕ್ಕೆ ತಕ್ಕ ಹೆಸರು 'ರಫೀಕನ ದುಖಾನೂ ಮತ್ತು ಅನಸೂಯಳ ದುಖಾನೂ' ಎಂದಾಗುತ್ತಿತ್ತೇನೋ! ತೇಜಸ್ವಿಯವರ 'ತುಕ್ಕೋಜಿ'ಯನ್ನು ನೆನಪಿಸಿದ ಕಿರಣ್ ಮಂಜುನಾಥ್‌ರ 'ರಫೀಕ'!



—ಎ. ಜಾನಕಿರಾಮ್, ಬೆಂಗಳೂರು

ಇಡೀ ಕಥೆಯ ಚೌಕಟ್ಟು ತುಂಬ ಅಚ್ಚುಕಟ್ಟಾಗಿದೆ. ಇಂದಿನ ಬಹುಸಂಖ್ಯಾತ ಕಥೆಗಾರರಲ್ಲಿ ಕಾಣದ ಮೆಲುದನಿ, ಒಂದು ಸರಳವಾದ ಸಂಗತಿಯನ್ನು ಅಷ್ಟೇ ಸರಳಗಾಗಿ ಹೇಳುತ್ತಲೇ ತುಂಬ ಗಹನವಾದ ಈ ಕಾಲಘಟ್ಟದ ಬಿಕ್ಕಟ್ಟನ್ನು ರಿಂಗಣಿಸುವ ಧ್ವನಿಶಕ್ತಿ ಈ ಕಥೆಯಲ್ಲಿದೆ. ಸಾಮಾನ್ಯವಾಗಿ ಮುಸ್ಲಿಮರದಲ್ಲದ ಕಥೆಗಾರರ ಕಥೆಗಳಲ್ಲಿ ಮುಸ್ಲಿಂ ಪಾತ್ರಗಳು ನಿರ್ದಿಷ್ಟ ಉದ್ದೇಶದ ಟೂಲ್‌ಗಳಾಗಿ ಬಳಕೆಯಾಗುತ್ತವೆ. ಆದರೆ ಇಲ್ಲಿ ಮುಸ್ಲಿಂ ಪಾತ್ರಗಳು ಎಷ್ಟು ಸಹಜವಾಗಿ ಅಡಕವಾಗಿವೆ ಎಂದರೆ ಕಥನ ವಾತಾವರಣದಲ್ಲಿ ಎಲ್ಲಿಯೂ ಅವರು 'ಅನ್ಯ' ಅನಿಸುವುದಿಲ್ಲ. ಅನಸೂಯಳ ಮನಸಲ್ಲಿರುವ ಸಂಗತಿ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡುವ ಚೋದ್ಯ, ಈ ಕಾಲದ ಬಹುಮುಖ್ಯ ರೋಗವೊಂದನ್ನು ತುಂಬ ಸೂಕ್ಷ್ಮವಾಗಿ ಧ್ವನಿಸುತ್ತದೆ. ಇಂಥ ಹಲವು ಕಾರಣಗಳಿಗೆ ಇದು ನಿಜವಾಗಿ ಈ ಕಾಲದ ಕಥೆ..

—ಕರುಣಾಕರ ಸಿ.ಎಂ., ಯಲ್ಲಾಪುರ

### ಅಯ್ಯೋ ಮರೆವು!

ಆ. 13ರ ಸಂಚಿಕೆಯಲ್ಲಿ ಡಾ. ಎಚ್.ಎಸ್. ಮೋಹನ್ ಅವರು ಬರೆದ 'ಅಯ್ಯೋ ಮರೆವು' ಲೇಖನ ಕುತೂಹಲಕಾರಿಯಾಗಿತ್ತು. ಅಲ್ಜೈಮರ್ಸ್ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಆತಂಕದ ಸಂಗತಿ. ಹಾಗಯೇ ನಮ್ಮ ಕಣ್ಣುಗಳನ್ನು ನೋಡಿ ಮರೆವಿನ ಕಾಯಿಲೆಯನ್ನು ಗುರ್ತಿಸಬಹುದು ಎಂಬ ವಿಷಯ ಅಷ್ಟೇ ಕುತೂಹಲಕಾರಿ. ಬೇರೆ ಬೇರೆ ಕೆಲಸ ಮಾಡುವ ನಮ್ಮ ಪಂಚೇಂದ್ರಿಯಗಳು ಹೇಗೆ ಪೂರಕವಾಗಿ ಇಡೀ ದೇಹದ ವ್ಯವಸ್ಥೆಯನ್ನು ಕಟ್ಟುತ್ತವೆ ಅಲ್ಲವೇ?

—ನಿಮಿತಾ ಸುಂದರ್, ಮೈಸೂರು

### ಹೊಸ ಲೀಡರ್

ಆ.13ರ ಸಂಚಿಕೆಯಲ್ಲಿ ಗಾಂಧಿನಗರ ಪೋಸ್ಟ್ ಪುಟದಲ್ಲಿ ಪ್ರಕಟವಾದ ಶಿವರಾಜ್‌ಕುಮಾರ್ ಅವರ ಸಂದರ್ಶನ ಕುತೂಹಲಕಾರಿಯಾಗಿದೆ. ಶಿವಣ್ಣ ಚಿತ್ರರಂಗದ ನೇತೃತ್ವ ವಹಿಸಿಕೊಂಡಿರುವುದು ಮತ್ತು ಅವರು ಎಲ್ಲರನ್ನೂ ಒಳಗೊಂಡು ಎಲ್ಲರಿಗೂ ಒಳಿತಾಗುವ ಹಾಗೆ ನಡೆದುಕೊಳ್ಳುವ ಮಾತುಗಳನ್ನಾಡಿರುವುದು ಆಶಾದಾಯಕ. ಅವರ ಆಶಯ ಕೃತಿಯಲ್ಲಿಯೂ ಸಾಕಾರಗೊಳ್ಳಲಿ.

—ರಾಘವೇಂದ್ರ ಆರ್. ಹೊಸಪೇಟೆ

### ಮೌನವಾಯಿತು ಗಗ್ಗರ

ಆ. 6ರ ಸಂಚಿಕೆಯಲ್ಲಿ ಪ್ರಕಾಟವಾದ ಉದ್ಯಾವರ ಮಾಧವ ಆಚಾರ್ಯರ 'ಮೌನವಾಯಿತು ಗಗ್ಗರ' ಒಂದು ಸಾಂದರ್ಭಿಕ, ಮನೋಜ್ಞ ಕಥೆ. ಕಥಾನಾಯಕನ ಅನುಸರಣೀಯ ಬಾಳ್ವೆ ಕಥೆಯ ಅಂತ್ಯದಲ್ಲಿ ಊರಿನ ಹೆಬ್ಬಾಗಿಲಿನಿಂದ ಯಾರಿಗೂ ಹೇಳದೆ, ಯಾರೊಡನೆಯೂ ಮಾತನಾಡದೆ ಮೌನವಾಗಿ ಹಿಂತಿರುಗುವ ಪ್ರಸಂಗದಿಂದ ಅವನ ಔನ್ನತ್ಯವನ್ನು ಮತ್ತಷ್ಟು ಮೇಲಕ್ಕೇರಿಸಿದೆ. ಚಿಕ್ಕದಾದ ಬಹು ಚೊಕ್ಕದಾಗಿ ಹೆಣೆದಿರುವ ಕಥೆ ನಿಜವಾಗಿ ನಡೆದ ಘಟನೆಯೇನೋ ಎನ್ನುವಷ್ಟು ಸುಲಲಿತವಾಗಿ ಮೂಡಿದೆ. ಕಥೆಯ ಲೇಖಕರಿಗೆ ಅಭಿನಂದನೆಗಳು.

—ಎಸ್. ಜ್ಞಾನಸುಂದರ್, ಬೆಂಗಳೂರು